**<u>ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಗುಬ್ಬಿ.</u>**

**<u>ಉಪಸ್ಥಿತರು</u>**

ಶ್ರೀಮತಿ. ಸವಿತರಾಣಿ ಹೆಚ್.ವಿ.,
ಬಿ.ಎ. ಎಲ್, ಎಲ್ಎಲ್.ಬಿ.,
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಗುಬ್ಬಿ.

**<u>ಅಸಲು ದಾವಾ ಸಂಖ್ಯೆ :338/2023</u>**

**<u>ದಿನಾಂಕ :08 ನೇ ಸೆಪ್ಟೆಂಬರ್ 2026</u>**

**ವಾದಿ/ಯರುಃ** **ಶ್ರೀಮತಿ ಪುಟ್ಟಮ್ಮ ಕೋಂ ಲೇಟ್ ಶಂಭಣ್ಣ,**
ಸುಮಾರು 69 ವರ್ಷ ವಯಸ್ಸು,

ವಾಸಃ ಎಂ.ಎನ್.ಕೋಟೆ, ನಿಟ್ಟೂರು ಹೋಬಳಿ,
ಗುಬ್ಬಿ ತಾಲ್ಲೂಕು. ತುಮಕೂರು ಜಿಲ್ಲೆ.

**(ಪ್ರತಿನಿಧಿಸುವವರುಃ ಶ್ರೀ ಹೆಚ್.ಜಿ.ಎಸ್., ನ್ಯಾಯವಾದಿಗಳು)**

**- ವಿರುದ್ದ -**

**ಪ್ರತಿವಾದಿ/ಯರುಃ** 1. **ಶ್ರೀ ಚನ್ನಬಸವಯ್ಯ ಬಿನ್ ಲೇಟ್ ಮುರುಗೇಂದ್ರಪ್ಪ,**
ಸುಮಾರು 58 ವರ್ಷ ವಯಸ್ಸು,

2. **ಶ್ರೀ ಲೋಕೇಶ್ ಬಿನ್ ಲೇಟ್ ಮುರುಗೇಂದ್ರಪ್ಪ,**
ಸುಮಾರು 58 ವರ್ಷ ವಯಸ್ಸು,

ಇಬ್ಬರೂ ವಾಸ : ಎಂ.ಎನ್.ಕೋಟೆ, ನಿಟ್ಟೂರು ಹೋಬಳಿ,
ಗುಬ್ಬಿ ತಾಲ್ಲೂಕು. ತುಮಕೂರು ಜಿಲ್ಲೆ.

**(ಪ್ರತಿನಿಧಿಸುವವರುಃ ಶ್ರೀ ಟಿ.ಎನ್.ಜಿ., ನ್ಯಾಯವಾದಿಗಳು)**

| | | | | |
|---|---|---|---|---|
| 1 | ದಾವಾ ದಾಖಲಿಸಿದ ದಿನಾಂಕ | 23.06.2023 | | |
| 2 | ದಾವಾ ಸ್ವರೂಪ | ಘೋಷಣಾತ್ಮಕ ಮತ್ತು ಶಾಶ್ವತ ನಿರ್ಬಂಧಕಾಜ್ಞೆ | | |
| 3 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 04.11.2025 | | |
| 4 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 08.09.2026 | | |
| 5 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | 03 | 02 | 16 |

ಸಹಿ/-
(ಶ್ರೀಮತಿ ಸವಿತರಾಣಿ.ಹೆಚ್.ವಿ)
ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಗುಬ್ಬಿ.

**:: ತೀರ್ಪು ::**

ಪ್ರಸ್ತುತ ಈ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ರಫ್ ನಕ್ಷೆಯಲ್ಲಿ ತೋರಿಸಿರುವ ಎಬಿಸಿಡಿ ಭಾಗದಲ್ಲಿರುವ ಹಾಲಿ ರಸ್ತೆಯ ಮೇಲೆ, ದಾವಾ ಸ್ವತ್ತನ್ನು ತಲುಪಲು ಅವಶ್ಯಕತೆಯ ಅನುಭೋಗದ ಹಕ್ಕಿದೆ (Easement of necessity) ಎಂದು ಘೋಷಣಾತ್ಮಕ ಪರಿಹಾರ ನೀಡಬೇಕೆಂದು ಮತ್ತು ತನ್ನ ಎಲ್ಲಾ ಕೃಷಿ ಉದ್ದೇಶಗಳಿಗಾಗಿ ವಸ್ತುಗಳನ್ನು ದಾವಾ ಅನುಸೂಚಿ ಸ್ವತ್ತಿಗೆ ಸಾಗಿಸಲು ಸದರಿ ದಾರಿಯನ್ನು ವಾದಿಯು ಶಾಂತಿಯುತವಾಗಿ ಉಪಯೋಗಿಸಲು ಪ್ರತಿವಾದಿಯರು ಹಸ್ತಕ್ಷೇಪ ಮಾಡದಂತೆ ಶಾಶ್ವತ ತಡೆಯಾಜ್ಞೆಯನ್ನು ನೀಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

**ದಾವಾ ಅನುಸೂಚಿ ಸ್ವತ್ತಿನ ವಿವರ ಈ ಕೆಳಕಂಡಂತಿರುತ್ತದೆ**

1. ಗುಬ್ಬಿ ತಾಲ್ಲೂಕು, ನಿಟ್ಟೂರು ಹೋಬಳಿ, ಜೋಗಿಹಳ್ಳಿ ಗ್ರಾಮ, ಸರ್ವೆ.ನಂ.4/1, ರಲ್ಲಿರುವ 2 ಎಕರೆ 05 ಗುಂಟೆ ಜಮೀನಿನ ಚೆಕ್ಕುಬಂದಿ,

| | | |
|---|---|---|
| ಪೂರ್ವಕ್ಕೆ | : | ರಂಗಮ್ಮ ರವರ ಜಮೀನು. |
| ಪಶ್ಚಿಮಕ್ಕೆ | : | ಸಿದ್ದಪ್ಪ ರವರ ಜಮೀನು. |
| ಉತ್ತರಕ್ಕೆ | : | ವೆಂಕಟೇಶಯ್ಯ ರವರ ಜಮೀನು. |
| ದಕ್ಷಿಣಕ್ಕೆ | : | ಚನ್ನಬಸವಯ್ಯ, ಲೋಕೇಶ್ ರವರ ಜಮೀನು. (1ಮತ್ತು 2ನೇ ಪ್ರತಿವಾದಿಯರು) |

**2. ದಾವೆಯ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇರುತ್ತದೆ:-**

ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ದಾರಿಗೆ ಸಂಬಂದಿಸಿದಂತೆ ಘೋಷಣಾತ್ಮಕ ಮತ್ತು ಶ್ವಾಶ್ವತ ನಿರ್ಬಂಧಕಾಜ್ಞೆ ಆದೇಶವನ್ನು ಕೋರಿ ಸಲ್ಲಿಸಿದ್ದು, ವಾದಿಯು ತನ್ನ ವಾದಪತ್ರದಲ್ಲಿ ತಿಳಿಸಿದಂತೆ ಗುಬ್ಬಿ ತಾಲ್ಲೂಕು, ನಿಟ್ಟೂರು ಹೋಬಳಿ, ಜೋಗಿಹಳ್ಳಿ,ಯ ಸರ್ವೆ ನಂಬರ್ 4/1 (ಹಳೆಯ ಸರ್ವೆ ನಂಬರ್ 4/p1 ಮತ್ತು 4/p2) ರ ಒಟ್ಟು 2 ಎಕರೆ 05 ಗುಂಟೆ ವಿಸ್ತೀರ್ಣದ ಜಮೀನು ಇರುತ್ತದೆ. ಇದರಲ್ಲಿ 1ನೇ ಬಿಟ್ ನಲ್ಲಿ 1 ಎಕರೆ 02 ಗುಂಟೆ ಮತ್ತು 2ನೇ ಬಿಟ್ ನಲ್ಲಿ 1 ಎಕರೆ 03 ಗುಂಟೆ ಒಳಗೊಂಡಿದೆ. ಈ ಜಮೀನನ್ನು ವಾದಿಯು ತಮ್ಮ ಪತಿ ಶಂಭಣ್ಣ ನವರ ಮರಣದ ನಂತರ ಪೌತಿ ವಾರಸುದಾರಕೆಯ ಮೂಲಕ ಕಾನೂನುಬದ್ಧವಾಗಿ ಪಡೆದುಕೊಂಡಿದ್ದಾರೆ. ದಾವಾ ಸ್ವತ್ತಿನ ಮ್ಯುಟೇಷನ್ ಕೂಡ ವಾದಿಯ ಹೆಸರಿಗೆ ಎಂ.ಆರ್.ನಂ. H4/2014- 15 ರ ಮೂಲಕ ಅಂಗೀಕರಿಸಲ್ಪಟ್ಟಿದೆ ಮತ್ತು ಪಹಣಿ ಕೂಡ ವಾದಿಯ ಹೆಸರಿನಲ್ಲೇ ಇದೆ. ವಾದಿಯ ಪತಿಯ ಮರಣದ ನಂತರ ವಾದಿಯೇ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದು, ಅದನ್ನು ಅನುಭವಿಸುತ್ತಿರುತ್ತಾರೆ. ಮೂಲತಃ ಸರ್ವೆ ನಂಬರ್ 4/1 ರಲ್ಲಿರುವ, 0-03 ಗುಂಟೆ ಒಳಗೊಂಡಂತೆ ಒಟ್ಟು 4 ಎಕರೆ 14 ಗುಂಟೆ ವಿಸ್ತೀರ್ಣದ ಜಮೀನು ವೀರಪ್ಪ ಎಂಬುವವರಿಗೆ ಸೇರಿದ್ದಾಗಿದ್ದು, ಅವರೇ ಅದರ ಮಾಲೀಕರಾಗಿದ್ದರು ಮತ್ತು ಸ್ವಾಧೀನದಲ್ಲಿದ್ದು ಅನುಭವಿಸುತ್ತಿದ್ದರು. ಸದರಿ ವೀರಪ್ಪ ನವರು ನಿಂಗಮ್ಮ ಎಂಬುವವರನ್ನು ವಿವಾಹವಾಗಿದ್ದು, ಅವರು ಮರಣ ಹೊಂದುವಾಗ ತಮ್ಮ ಮೂವರು ಗಂಡು ಮಕ್ಕಳಾದ

ಕಲ್ಲುವೀರಯ್ಯ, ಸಿದ್ದಲಿಂಗಪ್ಪ ಮತ್ತು ಶಂಭಣ್ಣ (ವಾದಿಯ ಪತಿ) ಮತ್ತು ಒಬ್ಬ ಮಗಳು ಶಿವಮ್ಮ (ಪ್ರತಿವಾದಿಗಳ ತಾಯಿ) ರವರನ್ನು ಬಿಟ್ಟು ಹೋಗಿದ್ದಾರೆ.

ಸದರಿ ಕಲ್ಲು ವೀರಯ್ಯ, ಸಿದ್ದಲಿಂಗಪ್ಪ, ಶಂಭಣ್ಣ (ವಾದಿಯ ಪತಿ) ಮತ್ತು ಮಗಳು ಶಿವಮ್ಮ (ಪ್ರತಿವಾದಿಗಳ ತಾಯಿ) ರವರುಗಳು ತಮ್ಮ ಪಿತ್ರಾರ್ಜಿತ ಆಸ್ತಿಯನ್ನು ಭಾಗ ಮಾಡಿಕೊಂಡಿದ್ದಾರೆ. ಸದರಿ ವಿಭಾಗದಲ್ಲಿ ಮೇಲಿನ ಜಮೀನು ಅಂದರೆ ಸರ್ವೆ ನಂಬರ್ 4/1 ರಲ್ಲಿರುವ 4 ಎಕರೆ 11 ಗುಂಟೆ ಆಸ್ತಿಯಲ್ಲಿ, ಸದರಿ ಜಮೀನಿನ ನೈರುತ್ಯ ಭಾಗದ 1 ಎಕರೆ 03 ಗುಂಟೆ ವಿಸ್ತೀರ್ಣದ ಜಮೀನು ಕಲ್ಲು ವೀರಯ್ಯನವರ ಪಾಲಿಗೆ ಬಂದಿದೆ (ಹೊಸ ಸರ್ವೆ ನಂಬರ್ 4/3 ವಿಸ್ತೀರ್ಣ 1-03 ಗುಂಟೆ), ಸದರಿ ಜಮೀನಿನ ಆಗ್ನೇಯ ಭಾಗದ 1 ಎಕರೆ 03 ಗುಂಟೆ ವಿಸ್ತೀರ್ಣದ ಜಮೀನು ಶಿವಮ್ಮ ನವರ ಪಾಲಿಗೆ ಬಂದಿದೆ (ಹೊಸ ಸರ್ವೆ ನಂಬರ್ 4/4 ವಿಸ್ತೀರ್ಣ 1-03 ಗುಂಟೆ), ಸದರಿ ಜಮೀನಿನ ವಾಯುವ್ಯ ಭಾಗದ 1 ಎಕರೆ 02 ಗುಂಟೆ ವಿಸ್ತೀರ್ಣದ ಜಮೀನು ಶಂಭಣ್ಣನವರ ಪಾಲಿಗೆ ಬಂದಿರುತ್ತದೆ. ಸದರಿ ಜಮೀನಿನ ಈಶಾನ್ಯ ಭಾಗದ 1 ಎಕರೆ 03 ಗುಂಟೆ ವಿಸ್ತೀರ್ಣದ ಜಮೀನು ಸಿದ್ದಲಿಂಗಪ್ಪನವರ ಪಾಲಿಗೆ ಬಂದಿರುತ್ತದೆ. ಸರ್ವೆ ನಂಬರ್ 4/1 ರ 4 ಎಕರೆ 11 ಗುಂಟೆ ವಿಸ್ತೀರ್ಣದ ಜಮೀನಿನ ದಕ್ಷಿಣ ಭಾಗದಲ್ಲಿ ಎಂ.ಎನ್.ಕೋಟೆಯಿಂದ ಭೋಗಸಂದ್ರ ರಸ್ತೆ ಅಸ್ತಿತ್ವದಲ್ಲಿರುತ್ತದೆ, ಆದ್ದರಿಂದ ವಿಭಜನೆಯ ಸಮಯದಲ್ಲಿ ಕಲ್ಲು ವೀರಯ್ಯ ಮತ್ತು ಶಿವಮ್ಮ ರವರುಗಳು ವಾದಿಯ ಆಸ್ತಿಗೆ ಬಂದು ಹೋಗಲು ದಾರಿಗಾಗಿ ತಮ್ಮ ತಮ್ಮ ಜಮೀನಿನಲ್ಲಿ ತಲಾ 0-02 ಗುಂಟೆ ಜಾಗವನ್ನು ಮೌಖಿಕವಾಗಿ ಬಿಟ್ಟಿರುತ್ತಾರೆ. ವಾದಿಯ ಗಂಡ ಆತನ ಸಹೋದರನಾದ ಸಿದ್ದಲಿಂಗಯ್ಯನವರ ಹಿಸ್ಸೆಗೆ ಬಂದಿದ್ದ ಸರ್ವೆ ನಂಬರ್ 4/1 ರ 1 ಎಕರೆ 03 ಗುಂಟೆ ಜಮೀನನ್ನು ಕಾನೂನು ಬದ್ದ ಪ್ರತಿಫಲಕ್ಕೆ ಖರೀದಿಸಿರುತ್ತಾರೆ. ನಂತರ ವಾದಿಯ ಗಂಡ ಶಂಭಣ್ಣ ನವರು ಸರ್ವೆ ನಂಬರ್ 4/1 ರಲ್ಲಿ ಒಟ್ಟು 2 ಎಕರೆ 05 ಗುಂಟೆಗೆ ಮಾಲೀಕರಾಗಿರುತ್ತಾರೆ. ಸದರಿ ಶಂಭಣ್ಣ ನವರ ಮರಣದ ನಂತರ, ಸದರಿ ಆಸ್ತಿಯು ವಾದಿಗೆ ಬಂದಿದ್ದು, ಸರ್ವೆ ನಂಬರ್ 4/3 ಮತ್ತು 4/4 ರಲ್ಲಿನ ರಸ್ತೆಯನ್ನು ಬಳಸಿಕೊಂಡು ಸದರಿ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ. ಕಲ್ವೀರಯ್ಯನವರ ಮರಣದ ನಂತರ, 1 ಎಕರೆ 03 ಗುಂಟೆ ವಿಸ್ತೀರ್ಣದ ಸರ್ವೆ ನಂ. 4/3 ರ ಜಮೀನನ್ನು ಅವರ ಮಕ್ಕಳಾದ ವೀರಭದ್ರಯ್ಯ, ರೇಣುಕಮ್ಮ, ಬಸವರಾಜು ಮತ್ತು

ಕುಮಾರಸ್ವಾಮಿ ರವರಿಗೆ ಪೌತಿ ವಾರಸು ಮೂಲಕ ಬಂದಿರುತ್ತದೆ. ಸದರಿ ವೀರಭದ್ರಯ್ಯ, ರೇಣುಕಮ್ಮ, ಬಸವರಾಜು ಮತ್ತು ಕುಮಾರಸ್ವಾಮಿ ರವರುಗಳು ಸೇರಿ ದಿನಾಂಕ:11.12.2019 ರಂದು ನೋಂದಾಯಿತ ಕ್ರಯ ಪತ್ರದ ಮೂಲಕ ರೂ.2,69,000 ಗಳ ಪ್ರತಿಫಲಕ್ಕೆ ಸದರಿ ಜಮೀನನ್ನು 1ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯ ಪತ್ರದ 4ನೇ ಪುಟದಲ್ಲಿ ಇದೇ ನಂಬರಿನಲ್ಲಿ ಪುಟ್ಟಮ್ಮನವರ ಹಾಗೂ ಅವರ ಕುಟುಂಬ ವರ್ಗಕ್ಕೆ ಬಿಟ್ಟಿರುವ 0-02 ಗುಂಟೆ ಜಮೀನನ್ನು ನೀವು ರಸ್ತೆಗೋಸ್ಕರವಾಗಿ ಬಿಟ್ಟು ಉಳಿದ 1 ಎಕರೆ 01 ಗುಂಟೆ ಜಮೀನಿನಲ್ಲಿ ಮರವಳಿಗಳನ್ನು ಇಡಲು, ಕೊಳವೆ ಬಾವಿ ಹಾಕಿಸಲು ಮತ್ತು ಮುಳ್ಳುತಂತಿ ಬೇಲಿ ಹಾಕಲು ನಿಮಗೆ ಅಧಿಕಾರ ಮತ್ತು ಅವಕಾಶ ಇರುತ್ತದೆ ಎಂದು ಸ್ಪಷ್ಟವಾಗಿ ನಮೂದಿಸಲಾಗಿರುತ್ತದೆ. ಸದರಿ ಕ್ರಯ ಪತ್ರದ ನಂತರ 1ನೇ ಪ್ರತಿವಾದಿಯು ಖರೀಸಿದ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದು, ಅದನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ.

ಸರ್ವೆ ನಂ. 4/4 (ಹಳೆಯ ನಂ. 4/1) ರ ಜಮೀನು ಶಿವಮ್ಮ ರವರ ಪಾಲಿಗೆ ಬಂದಿದ್ದು, ಶಿವಮ್ಮನವರ ಮಕ್ಕಳ ನಡುವಿನ ವಿಭಾಗದ ನಂತರ, ಸದರಿ ಸ್ವತ್ತು 2ನೇ ಪ್ರತಿವಾದಿಯಾಗಿರುವ ಲೋಕೇಶ್ ರವರ ಪಾಲಿಗೆ ಬಂದಿರುತ್ತದೆ. ಸರ್ವೆ ನಂಬರ್ 4/3 ಮತ್ತು 4/4 ರ ನಡುವೆ, ಪ್ರತಿ ಸರ್ವೆ ನಂಬರ್‌ನಲ್ಲಿ 0-02 ಗುಂಟೆ ವಿಸ್ತೀರ್ಣದ ರಸ್ತೆಯು ದಕ್ಷಿಣ-ಉತ್ತರ ದಿಕ್ಕಿನಲ್ಲಿದ್ದು, ಇದು ಉತ್ತರ ಭಾಗದಲ್ಲಿರುವ ಸರ್ವೆ ನಂಬರ್ 4/1 ಕ್ಕೆ ಸಂಪರ್ಕಿಸುತ್ತದೆ. ಸದರಿ ರಸ್ತೆಯು ಲಗತ್ತಿಸಲಾದ ಕರಡು ನಕಾಶೆಯಲ್ಲಿ ಎಬಿಸಿಡಿ ಎಂದು ತೋರಿಸಲ್ಪಟ್ಟಿರುತ್ತದೆ. ಸದರಿ ರಸ್ತೆಯು ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿರುತ್ತದೆ. ಎಂ.ಎನ್.ಕೋಟೆಯಿಂದ ಬೋಗಸಂದ್ರ ಮುಖ್ಯ ರಸ್ತೆಯಿಂದ ದಾವಾ ಶೆಡ್ಯೂಲ್ ಆಸ್ತಿಗೆ ತಲುಪಲು ಇದು ಒಂದೇ ಒಂದು ಮಾರ್ಗವಾಗಿರುತ್ತದೆ. ಈ ರಸ್ತೆಯನ್ನು ಹೊರತುಪಡಿಸಿ ದಾವಾ ಶೆಡ್ಯೂಲ್ ಆಸ್ತಿಗೆ ಪ್ರವೇಶಿಸಲು ಮತ್ತು ಹೊರಹೋಗಲು ಬೇರೆ ಯಾವುದೇ ಮಾರ್ಗವಿರುವುದಿಲ್ಲ. ಈ ರಸ್ತೆಯನ್ನು ದಾವಾ ಶೆಡ್ಯೂಲ್ ಆಸ್ತಿಗೆ ಕೃಷಿ ಉಪಕರಣಗಳು ಮತ್ತು ಗೊಬ್ಬರ ಇತ್ಯಾದಿಗಳನ್ನು ಕೊಂಡೊಯ್ಯಲು ಬಳಸಲಾಗುತ್ತಿದೆ. ಆದ್ದರಿಂದ, ಮೇಲಿನ ರಸ್ತೆಗೆ ಸಂಬಂಧಿಸಿದಂತೆ ವಾದಿಗೆ ಅವಶ್ಯಕತೆಯ ಅನುಬೋಗದ (easement of necessity) ಹಕ್ಕು ಇರುತ್ತದೆ. ಈ ವಿಷಯವು ಪ್ರತಿವಾದಿಗಳಿಗೆ ಚೆನ್ನಾಗಿ ತಿಳಿದಿದ್ದರೂ, ಪ್ರತಿವಾದಿಯರು ಇತರ

ಗ್ರಾಮಸ್ಥರೊಂದಿಗೆ ದುರುದ್ದೇಶದಿಂದ ಒಡನಾಟ ಹೊಂದಿದ್ದು, ಪ್ರತಿವಾದಿಗಳ ಆಸ್ತಿಯಲ್ಲಿರುವ ಲಗತ್ತಿಸಲಾದ ಕರಡು ನಕಾಶೆಯಲ್ಲಿ ಎಬಿಸಿಡಿ ಎಂದು ತೋರಿಸಲಾದ, ಸರ್ವೆ ನಂಬರ್ 4/3 ಮತ್ತು 4/4 ರ ನಡುವೆ ಇರುವ 0-02 ಗುಂಟೆ ವಿಸ್ತೀರ್ಣದ ಅಸ್ತಿತ್ವದಲ್ಲಿರುವ ರಸ್ತೆಯನ್ನು ಬಳಸಲು ವಾದಿಗೆ ಅಡ್ಡಿಪಡಿಸಲು ಪ್ರಯತ್ನಿಸುತ್ತಿರುತ್ತಾರೆ.

ಪ್ರತಿವಾದಿಗಳು ಸ್ಥಳೀಯವಾಗಿ ಶ್ರೀಮಂತರು ಮತ್ತು ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಾಗಿದ್ದಾರೆ. ವಾದಿಯು ಬಡ ಮಹಿಳೆ, ವಿಧವೆಯಾಗಿದ್ದು, ಪ್ರತಿವಾದಿಯರ ಈ ಕಾನೂನು ಬಾಹಿರ ನಡೆಯನ್ನು ತಡೆಯಲು ನ್ಯಾಯಾಲಯದ ಸಹಾಯವಿಲ್ಲದೆ ಸಾಧ್ಯವಾಗಿರುವುದಿಲ್ಲ. ಆದ್ದರಿಂದ ವಾದಿಯು ಎಬಿಸಿಡಿ ಭಾಗದಲ್ಲಿರುವ ಹಾಲಿ ರಸ್ತೆಯ ಮೇಲೆ, ದಾವಾ ಸ್ವತ್ತನ್ನು ಪ್ರವೇಶಿಸಲು ಮತ್ತು ಹೊರಹೋಗಲು ಹಾಗೂ ದಾವಾ ಅನುಸೂಚಿ ಸ್ವತ್ತನ್ನು ತಲುಪಲು ಅವಶ್ಯಕ ಅನುಭೋಗದ (Easement of necessity) ಹಕ್ಕಿದೆ ಎಂದು ಘೋಷಣಾತ್ಮಕ ಪರಿಹಾರ ನೀಡಬೇಕೆಂದು ಮತ್ತು ತನ್ನ ಎಲ್ಲಾ ಕೃಷಿ ಉದ್ದೇಶಗಳಿಗಾಗಿ ಮತ್ತು ವಸ್ತುಗಳನ್ನು ದಾವಾ ಅನುಸೂಚಿ ಸ್ವತ್ತಿಗೆ ಸಾಗಿಸಲು ಸದರಿ ದಾರಿಯನ್ನು ಶಾಂತಿಯುತವಾಗಿ ಉಪಯೋಗಿಲು ಪ್ರತಿವಾದಿಯರು ಹಸ್ತಕ್ಷೇಪ ಮಾಡದಂತೆ ಶಾಶ್ವತ ತಡೆಯಾಜ್ಞೆಯನ್ನು ನೀಡಬೇಕೆಂದು ಕೋರಿ ಈ ದಾವೆಯನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

**3**. ವಾದಿಯ ದಾವೆಯನ್ನು ದಾಖಲಿಸಿಕೊಂಡ ನಂತರ ಪ್ರತಿವಾದಿಯರಿಗೆ ನ್ಯಾಯಾಲಯದ ಮೂಲಕ ಸಮನ್ಸ್ ನ್ನು ಜಾರಿಗೊಳಿಸಿದ್ದು, ಸದರಿ ಸಮನ್ಸ್ ನ್ನು ಪ್ರತಿವಾದಿಯರು ಸ್ವೀಕರಿಸಿ ನ್ಯಾಯಾಲಯಕ್ಕೆ ತಮ್ಮ ವಕೀಲರ ಮೂಲಕ ಹಾಜರಾಗಿದ್ದರೂ ಸಹ ತಮ್ಮ ಪರ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

**4**. ವಾದಿಯರ ಪರ ವಕೀಲರ ವಾದವನ್ನು ಆಲಿಸಲಾಯಿತು.

**5**. ಮೇಲ್ಕಾಣಿಸಿದ ವಾದ ಪತ್ರದ ಸಂಗತಿಗಳನ್ನು ಆಧರಿಸಿ ಈ ಕೆಳಕಾಣಿಸಿದ ಅಂಶಗಳನ್ನು ರೂಪಿಸಲಾಗಿದೆ.

## ಅಂಶಗಳು

1. ವಾದಿಯು ಕರಡು ನಕ್ಷೆಯಲ್ಲಿ ತೋರಿಸಿರುವ ಎಬಿಸಿಡಿ ಭಾಗದಲ್ಲಿರುವ ಹಾಲಿ ರಸ್ತೆಯ ಮೇಲೆ, ದಾವಾ ಸ್ವತ್ತನ್ನು ತಲುಪಲು ಅವಶ್ಯಕತೆಯ ಅನುಭೋಗದ (Easement of necessity) ಹಕ್ಕಿದೆ ಎಂದು ಸಾಬೀತು ಪಡಿಸುತ್ತಾರೆಯೇ?
2. ಪ್ರತಿವಾದಿಯರು ವಾದಿಯ ದಾವಾ ಅನುಸೂಚಿತ ಸ್ವತ್ತಿಗೆ ಹೋಗಲು ಇರುವ ದಾರಿಯನ್ನು ಶಾಂತಿಯುತವಾಗಿ ಉಪಯೋಗಿಸಲು ಹಸ್ತಕ್ಷೇಪ ಮಾಡಿ ತೊಂದರೆ ಉಂಟುಮಾಡುತ್ತಿರುತ್ತಾರೆಂದು ವಾದಿಯು ಸಾಬೀತುಪಡಿಸುತ್ತಾರೆಯೇ?
3. ವಾದಿಯು ತಾವು ಕೇಳಿದ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆಂದು ಸಾಬೀತು ಪಡಿಸುತ್ತಾರೆಯೇ?
4. ಯಾವ ಆದೇಶ ಅಥವಾ ಡಿಕ್ರಿ?

**6**. ಮೇಲ್ಕಾಣಿಸಿದ ಅಂಶಗಳನ್ನು ರುಜುವಾತುಪಡಿಸುವ ಸಲುವಾಗಿ ವಾದಿಯು ತನ್ನನ್ನು ತಾನು ಪಿ.ಡಬ್ಲ್ಯೂ -1 ಎಂದು ಸಾಕ್ಷಿ ಮಾಡಿಸಿದ್ದು, ತನ್ನ ಪರವಾಗಿ ನಿಶಾನೆ.ಪಿ.1 ರಿಂದ ನಿಶಾನೆ.ಪಿ.9 ದಾಖಲೆಗಳನ್ನು ಹಾಜರುಪಡಿಸಿದ್ದು, ನಿಶಾನೆಗಳಾಗಿ ಗುರ್ತಿಸಿಕೊಂಡಿರುತ್ತಾರೆ. ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಸಹ ತಮ್ಮ ಪರ ಪ್ರತಿವಾದಪತ್ರ ಸಲ್ಲಿಸಿರುವುದಿಲ್ಲ ಹಾಗೂ ಪಿ.ಡಬ್ಲ್ಯೂ -1 ರವರನ್ನು ಪಾಟೀ ಸವಾಲು ಮಾಡಿರುವುದಿಲ್ಲ. ಅಲ್ಲದೇ ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷಿ ಮತ್ತು ದಾಖಲಾತಿಗಳನ್ನು ಗುರ್ತಿಸಿಕೊಂಡಿರುವುದಿಲ್ಲ. ಆದ್ದರಿಂದ ಅವರ ಪರವಾಗಿ ಯಾವುದೇ ಸಾಕ್ಷಿ ಇಲ್ಲವೆಂದು ನ್ಯಾಯಾಲಯವು ತೆಗೆದುಕೊಳ್ಳಲಾಗಿರುತ್ತದೆ.

**7**. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆಃ-

ವಿವಾದಾಂಶ ಸಂಖ್ಯೆ -1 : ಸಕಾರಾತ್ಮಕವಾಗಿ.

ವಿವಾದಾಂಶ ಸಂಖ್ಯೆ -2 : ಸಕಾರಾತ್ಮಕವಾಗಿ.

ವಿವಾದಾಂಶ ಸಂಖ್ಯೆ -3 : ಸಕಾರಾತ್ಮಕವಾಗಿ

ವಿವಾದಾಂಶ ಸಂಖ್ಯೆ -4 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

**:: ಕಾರಣಗಳು ::**

**8. ಅಂಶ ಸಂಖ್ಯೆ - 1 ರಿಂದ 3 :** ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದಲೂ ಮತ್ತು ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದಲೂ ಈ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಸಾಬೀತುಪಡಿಸುವಂತಹ ಹೊಣೆಗಾರಿಕೆಯನ್ನು ವಾದಿಯು ಹೊಂದಿದ್ದು, ಸದರಿ ಅಂಶಗಳನ್ನು ಸಾಬೀತುಪಡಿಸಲು ವಾದಿಯು ನ್ಯಾಯಾಲಯದಲ್ಲಿ ಹಾಜರಾಗಿ ತನ್ನ ಪರವಾಗಿ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ನೀಡಿರುತ್ತಾರೆ.

**9.** ವಾದಿಯು ತನ್ನ ಮಗನಿಗೆ ವಿಶೇಷ ಮುಕ್ತ್ಯಾರ್ ನಾಮೆಯ ಮೂಲಕ ಅಧಿಕಾರ ನೀಡಿದ್ದು, ವಾದಿಯ ಮಗ ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ತನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ತನ್ನ ವಾದ ಪತ್ರದಲ್ಲಿ ತಿಳಿಸಿರುವ ಅಂಶಗಳನ್ನೇ ಪುನರುಚ್ಚರಿಸಿರುತ್ತಾರೆ. ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ದಾರಿಗೆ ಸಂಬಂದಿಸಿದಂತೆ ಘೋಷಣಾತ್ಮಕ ಮತ್ತು ಶ್ವಾಶ್ವತ ನಿರ್ಬಂಧಕಾಜ್ಞೆ ಆದೇಶವನ್ನು ಕೋರಿ ಸಲ್ಲಿಸಿದ್ದು, ವಾದಿಯು ತನ್ನ ವಾದಪತ್ರದಲ್ಲಿ ತಿಳಿಸಿದಂತೆ ಗುಬ್ಬಿ ತಾಲ್ಲೂಕು, ನಿಟ್ಟೂರು ಹೋಬಳಿ, ಜೋಗಿಹಳ್ಳಿ,ಯ ಸರ್ವೆ ನಂಬರ್ 4/1 (ಹಳೆಯ ಸರ್ವೆ ನಂಬರ್ 4/p1 ಮತ್ತು 4/p2) ರ ಒಟ್ಟು 2 ಎಕರೆ 05 ಗುಂಟೆ ವಿಸ್ತೀರ್ಣದ ಜಮೀನು ಇರುತ್ತದೆ. ಇದರಲ್ಲಿ 1ನೇ ಬಿಟ್ ನಲ್ಲಿ 1 ಎಕರೆ 02 ಗುಂಟೆ ಮತ್ತು 2ನೇ ಬಿಟ್ ನಲ್ಲಿ 1 ಎಕರೆ 03 ಗುಂಟೆ ಒಳಗೊಂಡಿದೆ. ಈ ಜಮೀನನ್ನು ವಾದಿಯು ತಮ್ಮ ಪತಿ ಶಂಭಣ್ಣ ನವರ ಮರಣದ ನಂತರ ಪೌತಿ ವಾರಸುದಾರಕೆಯ ಮೂಲಕ ಕಾನೂನುಬದ್ಧವಾಗಿ ಪಡೆದುಕೊಂಡಿದ್ದಾರೆ. ದಾವಾ ಸ್ವತ್ತಿನ ಮ್ಯುಟೇಷನ್ ಕೂಡ ವಾದಿಯ ಹೆಸರಿಗೆ ಎಂ.ಆರ್.ನಂ. H4/2014- 15 ರ ಮೂಲಕ ಅಂಗೀಕರಿಸಲ್ಪಟ್ಟಿದೆ ಮತ್ತು ಪಹಣಿ ಕೂಡ ವಾದಿಯ ಹೆಸರಿನಲ್ಲೇ ಇದೆ. ವಾದಿಯ ಪತಿಯ ಮರಣದ ನಂತರ ವಾದಿಯೇ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದು, ಅದನ್ನು ಅನುಭವಿಸುತ್ತಿರುತ್ತಾರೆ. ಮೂಲತಃ

ಸರ್ವೆ ನಂಬರ್ 4/1 ರಲ್ಲಿರುವ, 0-03 ಗುಂಟೆ ಒಳಗೊಂಡಂತೆ ಒಟ್ಟು 4 ಎಕರೆ 14 ಗುಂಟೆ ವಿಸ್ತೀರ್ಣದ ಜಮೀನು ವೀರಪ್ಪ ಎಂಬುವವರಿಗೆ ಸೇರಿದ್ದಾಗಿದ್ದು, ಅವರೇ ಅದರ ಮಾಲೀಕರಾಗಿದ್ದರು ಮತ್ತು ಸ್ವಾಧೀನದಲ್ಲಿದ್ದು ಅನುಭವಿಸುತ್ತಿದ್ದರು. ಸದರಿ ವೀರಪ್ಪ ನವರು ನಿಂಗಮ್ಮ ಎಂಬುವವರನ್ನು ವಿವಾಹವಾಗಿದ್ದು, ಅವರು ಮರಣ ಹೊಂದುವಾಗ ತಮ್ಮ ಮೂವರು ಗಂಡು ಮಕ್ಕಳಾದ ಕಲ್ಲುವೀರಯ್ಯ, ಸಿದ್ದಲಿಂಗಪ್ಪ ಮತ್ತು ಶಂಭಣ್ಣ (ವಾದಿಯ ಪತಿ) ಮತ್ತು ಒಬ್ಬ ಮಗಳು ಶಿವಮ್ಮ (ಪ್ರತಿವಾದಿಗಳ ತಾಯಿ) ರವರನ್ನು ಬಿಟ್ಟು ಹೋಗಿದ್ದಾರೆ.

ಸದರಿ ಕಲ್ಲುವೀರಯ್ಯ, ಸಿದ್ದಲಿಂಗಪ್ಪ, ಶಂಭಣ್ಣ (ವಾದಿಯ ಪತಿ) ಮತ್ತು ಮಗಳು ಶಿವಮ್ಮ (ಪ್ರತಿವಾದಿಗಳ ತಾಯಿ) ರವರುಗಳು ತಮ್ಮ ಪಿತ್ರಾರ್ಜಿತ ಆಸ್ತಿಯನ್ನು ಭಾಗ ಮಾಡಿಕೊಂಡಿದ್ದಾರೆ. ಸದರಿ ವಿಭಾಗದಲ್ಲಿ ಮೇಲಿನ ಜಮೀನು ಅಂದರೆ ಸರ್ವೆ ನಂಬರ್ 4/1 ರಲ್ಲಿರುವ 4 ಎಕರೆ 11 ಗುಂಟೆ ಆಸ್ತಿಯಲ್ಲಿ, ಸದರಿ ಜಮೀನಿನ ನೈಋತ್ಯ ಭಾಗದ 1 ಎಕರೆ 03 ಗುಂಟೆ ವಿಸ್ತೀರ್ಣದ ಜಮೀನು ಕಲ್ಲು ವೀರಯ್ಯನವರ ಪಾಲಿಗೆ ಬಂದಿದೆ (ಹೊಸ ಸರ್ವೆ ನಂಬರ್ 4/3 ವಿಸ್ತೀರ್ಣ 1-03 ಗುಂಟೆ), ಸದರಿ ಜಮೀನಿನ ಆಗ್ನೇಯ ಭಾಗದ 1 ಎಕರೆ 03 ಗುಂಟೆ ವಿಸ್ತೀರ್ಣದ ಜಮೀನು ಶಿವಮ್ಮ ನವರ ಪಾಲಿಗೆ ಬಂದಿದೆ (ಹೊಸ ಸರ್ವೆ ನಂಬರ್ 4/4 ವಿಸ್ತೀರ್ಣ 1-03 ಗುಂಟೆ), ಸದರಿ ಜಮೀನಿನ ವಾಯುವ್ಯ ಭಾಗದ 1 ಎಕರೆ 02 ಗುಂಟೆ ವಿಸ್ತೀರ್ಣದ ಜಮೀನು ಶಂಭಣ್ಣನವರ ಪಾಲಿಗೆ ಬಂದಿರುತ್ತದೆ. ಸದರಿ ಜಮೀನಿನ ಈಶಾನ್ಯ ಭಾಗದ 1 ಎಕರೆ 03 ಗುಂಟೆ ವಿಸ್ತೀರ್ಣದ ಜಮೀನು ಸಿದ್ದಲಿಂಗಪ್ಪನವರ ಪಾಲಿಗೆ ಬಂದಿರುತ್ತದೆ. ಸರ್ವೆ ನಂಬರ್ 4/1 ರ 4 ಎಕರೆ 11 ಗುಂಟೆ ವಿಸ್ತೀರ್ಣದ ಜಮೀನಿನ ದಕ್ಷಿಣ ಭಾಗದಲ್ಲಿ ಎಂ.ಎನ್.ಕೋಟೆಯಿಂದ ಭೋಗಸಂದ್ರ ರಸ್ತೆ ಅಸ್ತಿತ್ವದಲ್ಲಿರುತ್ತದೆ, ಆದ್ದರಿಂದ ವಿಭಜನೆಯ ಸಮಯದಲ್ಲಿ ಕಲ್ಲು ವೀರಯ್ಯ ಮತ್ತು ಶಿವಮ್ಮ ರವರುಗಳು ವಾದಿಯ ಆಸ್ತಿಗೆ ಬಂದು ಹೋಗಲು ದಾರಿಗಾಗಿ ತಮ್ಮ ತಮ್ಮ ಜಮೀನಿನಲ್ಲಿ ತಲಾ 0-02 ಗುಂಟೆ ಜಾಗವನ್ನು ಮೌಖಿಕವಾಗಿ ಬಿಟ್ಟಿರುತ್ತಾರೆ. ವಾದಿಯ ಗಂಡ ಆತನ ಸಹೋದರನಾದ ಸಿದ್ದಲಿಂಗಯ್ಯನವರ ಹಿಸ್ಸೆಗೆ ಬಂದಿದ್ದ ಸರ್ವೆ ನಂಬರ್ 4/1 ರ 1 ಎಕರೆ 03 ಗುಂಟೆ ಜಮೀನನ್ನು ಕಾನೂನು ಬದ್ದ ಪ್ರತಿಫಲಕ್ಕೆ ಖರೀದಿಸಿರುತ್ತಾರೆ. ನಂತರ ವಾದಿಯ ಗಂಡ ಶಂಭಣ್ಣ ನವರು ಸರ್ವೆ ನಂಬರ್ 4/1 ರಲ್ಲಿ ಒಟ್ಟು 2 ಎಕರೆ 05 ಗುಂಟೆಗೆ

ಮಾಲೀಕರಾಗಿರುತ್ತಾರೆ. ಸದರಿ ಶಂಭಣ್ಣ ನವರ ಮರಣದ ನಂತರ, ಸದರಿ ಆಸ್ತಿಯು ವಾದಿಗೆ ಬಂದಿದ್ದು, ಸರ್ವೆ ನಂಬರ್ 4/3 ಮತ್ತು 4/4 ರಲ್ಲಿನ ರಸ್ತೆಯನ್ನು ಬಳಸಿಕೊಂಡು ಸದರಿ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ. ಕಲ್ಲುವೀರಯ್ಯನವರ ಮರಣದ ನಂತರ, 1 ಎಕರೆ 03 ಗುಂಟೆ ವಿಸ್ತೀರ್ಣದ ಸರ್ವೆ ನಂ. 4/3 ರ ಜಮೀನನ್ನು ಅವರ ಮಕ್ಕಳಾದ ವೀರಭದ್ರಯ್ಯ, ರೇಣುಕಮ್ಮ, ಬಸವರಾಜು ಮತ್ತು ಕುಮಾರಸ್ವಾಮಿ ರವರಿಗೆ ಪೌತಿ ವಾರಸು ಮೂಲಕ ಬಂದಿರುತ್ತದೆ. ಸದರಿ ವೀರಭದ್ರಯ್ಯ, ರೇಣುಕಮ್ಮ, ಬಸವರಾಜು ಮತ್ತು ಕುಮಾರಸ್ವಾಮಿ ರವರುಗಳು ಸೇರಿ ದಿನಾಂಕ:11.12.2019 ರಂದು ನೋಂದಾಯಿತ ಕ್ರಯ ಪತ್ರದ ಮೂಲಕ ರೂ.2,69,000 ಗಳ ಪ್ರತಿಫಲಕ್ಕೆ ಸದರಿ ಜಮೀನನ್ನು 1ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯ ಪತ್ರದ 4ನೇ ಪುಟದಲ್ಲಿ ಇದೇ ನಂಬರಿನಲ್ಲಿ ಪುಟ್ಟಮ್ಮನವರ ಹಾಗೂ ಅವರ ಕುಟುಂಬ ವರ್ಗಕ್ಕೆ ಬಿಟ್ಟಿರುವ 0-02 ಗುಂಟೆ ಜಮೀನನ್ನು ನೀವು ರಸ್ತೆಗೋಸ್ಕರವಾಗಿ ಬಿಟ್ಟು ಉಳಿದ 1 ಎಕರೆ 01 ಗುಂಟೆ ಜಮೀನಿನಲ್ಲಿ ಮರವಳಿಗಳನ್ನು ಇಡಲು, ಕೊಳವೆ ಬಾವಿ ಹಾಕಿಸಲು ಮತ್ತು ಮುಳ್ಳುತಂತಿ ಬೇಲಿ ಹಾಕಲು ನಿಮಗೆ ಅಧಿಕಾರ ಮತ್ತು ಅವಕಾಶ ಇರುತ್ತದೆ ಎಂದು ಸ್ಪಷ್ಟವಾಗಿ ನಮೂದಿಸಲಾಗಿರುತ್ತದೆ. ಸದರಿ ಕ್ರಯ ಪತ್ರದ ನಂತರ 1ನೇ ಪ್ರತಿವಾದಿಯು ಖರೀಸಿದ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದು, ಅದನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ.

ಸರ್ವೆ ನಂ. 4/4 (ಹಳೆಯ ನಂ. 4/1) ರ ಜಮೀನು ಶಿವಮ್ಮ ರವರ ಪಾಲಿಗೆ ಬಂದಿದ್ದು, ಶಿವಮ್ಮನವರ ಮಕ್ಕಳ ನಡುವಿನ ವಿಭಾಗದ ನಂತರ, ಸದರಿ ಸ್ವತ್ತು 2ನೇ ಪ್ರತಿವಾದಿಯಾಗಿರುವ ಲೋಕೇಶ್ ರವರ ಪಾಲಿಗೆ ಬಂದಿರುತ್ತದೆ. ಸರ್ವೆ ನಂಬರ್ 4/3 ಮತ್ತು 4/4 ರ ನಡುವೆ, ಪ್ರತಿ ಸರ್ವೆ ನಂಬರ್‌ನಲ್ಲಿ 0-02 ಗುಂಟೆ ವಿಸ್ತೀರ್ಣದ ರಸ್ತೆಯು ದಕ್ಷಿಣ-ಉತ್ತರ ದಿಕ್ಕಿನಲ್ಲಿದ್ದು, ಇದು ಉತ್ತರ ಭಾಗದಲ್ಲಿರುವ ಸರ್ವೆ ನಂಬರ್ 4/1 ಕ್ಕೆ ಸಂಪರ್ಕಿಸುತ್ತದೆ. ಸದರಿ ರಸ್ತೆಯು ಲಗತ್ತಿಸಲಾದ ಕರಡು ನಕಾಶೆಯಲ್ಲಿ ಎಬಿಸಿಡಿ ಎಂದು ತೋರಿಸಲ್ಪಟ್ಟಿರುತ್ತದೆ. ಸದರಿ ರಸ್ತೆಯು ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿರುತ್ತದೆ. ಎಂ.ಎನ್.ಕೋಟೆಯಿಂದ ಬೋಗಸಂದ್ರ ಮುಖ್ಯ ರಸ್ತೆಯಿಂದ ದಾವಾ ಶೆಡ್ಯೂಲ್ ಆಸ್ತಿಗೆ ತಲುಪಲು ಇದು ಒಂದೇ ಒಂದು ಮಾರ್ಗವಾಗಿರುತ್ತದೆ. ಈ ರಸ್ತೆಯನ್ನು ಹೊರತುಪಡಿಸಿ

ದಾವಾ ಶೆಡ್ಯೂಲ್ ಆಸ್ತಿಗೆ ಪ್ರವೇಶಿಸಲು ಮತ್ತು ಹೊರಹೋಗಲು ಬೇರೆ ಯಾವುದೇ ಮಾರ್ಗವಿರುವುದಿಲ್ಲ. ಈ ರಸ್ತೆಯನ್ನು ದಾವಾ ಶೆಡ್ಯೂಲ್ ಆಸ್ತಿಗೆ ಕೃಷಿ ಉಪಕರಣಗಳು ಮತ್ತು ಗೊಬ್ಬರ ಇತ್ಯಾದಿಗಳನ್ನು ಕೊಂಡೊಯ್ಯಲು ಬಳಸಲಾಗುತ್ತಿದೆ. ಆದ್ದರಿಂದ, ಮೇಲಿನ ರಸ್ತೆಗೆ ಸಂಬಂಧಿಸಿದಂತೆ ವಾದಿಗೆ ಅವಶ್ಯಕತೆಯ ಅನುಬೋಗದ (easement of necessity) ಹಕ್ಕು ಇರುತ್ತದೆ. ಈ ವಿಷಯವು ಪ್ರತಿವಾದಿಗಳಿಗೆ ಚೆನ್ನಾಗಿ ತಿಳಿದಿದ್ದರೂ, ಪ್ರತಿವಾದಿಯರು ಇತರ ಗ್ರಾಮಸ್ಥರೊಂದಿಗೆ ದುರುದ್ದೇಶದಿಂದ ಒಡನಾಟ ಹೊಂದಿದ್ದು, ಪ್ರತಿವಾದಿಗಳ ಆಸ್ತಿಯಲ್ಲಿರುವ ಲಗತ್ತಿಸಲಾದ ಕರಡು ನಕಾಶೆಯಲ್ಲಿ ಎಬಿಸಿಡಿ ಎಂದು ತೋರಿಸಲಾದ, ಸರ್ವೆ ನಂಬರ್ 4/3 ಮತ್ತು 4/4 ರ ನಡುವೆ ಇರುವ 0-02 ಗುಂಟೆ ವಿಸ್ತೀರ್ಣದ ಅಸ್ತಿತ್ವದಲ್ಲಿರುವ ರಸ್ತೆಯನ್ನು ಬಳಸಲು ವಾದಿಗೆ ಅಡ್ಡಿಪಡಿಸಲು ಪ್ರಯತ್ನಿಸುತ್ತಿರುತ್ತಾರೆ.

ಪ್ರತಿವಾದಿಗಳು ಸ್ಥಳೀಯವಾಗಿ ಶ್ರೀಮಂತರು ಮತ್ತು ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಾಗಿದ್ದಾರೆ. ವಾದಿಯು ಬಡ ಮಹಿಳೆ, ವಿಧವೆಯಾಗಿದ್ದು, ಪ್ರತಿವಾದಿಯರ ಈ ಕಾನೂನು ಬಾಹಿರ ನಡೆಯನ್ನು ತಡೆಯಲು ನ್ಯಾಯಾಲಯದ ಸಹಾಯವಿಲ್ಲದೆ ಸಾಧ್ಯವಾಗಿರುವುದಿಲ್ಲ. ಆದ್ದರಿಂದ ವಾದಿಯು ಎಬಿಸಿಡಿ ಭಾಗದಲ್ಲಿರುವ ಹಾಲಿ ರಸ್ತೆಯ ಮೇಲೆ, ದಾವಾ ಸ್ವತ್ತನ್ನು ಪ್ರವೇಶಿಸಲು ಮತ್ತು ಹೊರಹೋಗಲು ಹಾಗೂ ದಾವಾ ಅನುಸೂಚಿ ಸ್ವತ್ತನ್ನು ತಲುಪಲು ಅವಶ್ಯಕ ಅನುಭೋಗದ (Easement of necessity) ಹಕ್ಕಿದೆ ಎಂದು ಘೋಷಣಾತ್ಮಕ ಪರಿಹಾರ ನೀಡಬೇಕೆಂದು ಮತ್ತು ತನ್ನ ಎಲ್ಲಾ ಕೃಷಿ ಉದ್ದೇಶಗಳಿಗಾಗಿ ಮತ್ತು ವಸ್ತುಗಳನ್ನು ದಾವಾ ಅನುಸೂಚಿ ಸ್ವತ್ತಿಗೆ ಸಾಗಿಸಲು ಸದರಿ ದಾರಿಯನ್ನು ಶಾಂತಿಯುತವಾಗಿ ಉಪಯೋಗಿಲು ಪ್ರತಿವಾದಿಯರು ಹಸ್ತಕ್ಷೇಪ ಮಾಡದಂತೆ ಶಾಶ್ವತ ತಡೆಯಾಜ್ಞೆಯನ್ನು ನೀಡಬೇಕೆಂದು ಕೋರಿ ಈ ದಾವೆಯನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

**10**. ವಾದಿಯು ತನ್ನ ವಾದಪತ್ರ ಮತ್ತು ಪ್ರಮಾಣಪತ್ರದಲ್ಲಿ ತಿಳಿಸಿದ ಅಂಶಗಳನ್ನು ರುಜುವಾತುಪಡಿಸಲು ವಾದಿಯ ಮಗನಿಗೆ ವಿಶೇಷ ಮುಕ್ತಾರ್ ನಾಮೆಯ ಮೂಲಕ ಅಧಿಕಾರ ನೀಡಿದ್ದು, ವಾದಿಯ ಮಗ ತನ್ನನ್ನು ತಾನು ಪಿ.ಡಬ್ಲ್ಯೂ -1 ಎಂದು ಸಾಕ್ಷಿ ವಿಚಾರಣೆಗೆ ಒಳಪಡಿಸಿಕೊಂಡು ತನ್ನ ಪರ ನಿಶಾನೆ.ಪಿ-1 ರಿಂದ ನಿಶಾನೆ.ಪಿ-9ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. **ನಿಶಾನೆ.ಪಿ-1**

ಸ.ನಂ.4/1 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ವಾದಿಯ ಹೆಸರಿನಲ್ಲಿ 1 ಎಕರೆ 02 ಗುಂಟೆ ಮತ್ತು 1 ಎಕರೆ 03 ಗುಂಟೆ ಜಮೀನು ಇರುವುದು ಕಂಡುಬಂದಿರುತ್ತದೆ. **ನಿಶಾನೆ.ಪಿ-2** ಮ್ಯುಟೇಶನ್ ರಿಜಿಸ್ಟರ್ ಪ್ರತಿಯಾಗಿದ್ದು, 1 ಎಕರೆ 2 ಗುಂಟೆ ಮತ್ತು 1 ಎಕರೆ 03 ಗುಂಟೆ ಆಸ್ತಿಯು ವಾದಿಯ ಗಂಡನಿಂದ ವಾದಿಗೆ ಪೌತಿ ಖಾತೆ ಆಧಾರದ ಮೇರೆಗೆ ಹಕ್ಕು ಬದಲಾವಣೆ ಮೂಲಕ ವರ್ಗಾವಣೆಯಾಗಿರುವುದು ಕಂಡುಬಂದಿರುತ್ತದೆ. **ನಿಶಾನೆ.ಪಿ-3** ಸ.ನಂ.4/3 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, 1ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯದಂತೆ 1 ಎಕರೆ 03 ಗುಂಟೆ ಜಮೀನು ನಮೂದು ಇರುವುದು ಕಂಡುಬಂದಿರುತ್ತದೆ. **ನಿಶಾನೆ.ಪಿ-4** ಸ.ನಂ.4/4 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, 2ನೇ ಪ್ರತಿವಾದಿಯ ಹೆಸರಿನಲ್ಲಿ 1 ಎಕರೆ 03 ಗುಂಟೆ ಜಮೀನು ವಿಭಾಗದಂತೆ ನಮೂದು ಇರುವುದು ಕಂಡುಬಂದಿರುತ್ತದೆ. **ನಿಶಾನೆ.ಪಿ-5** ಸ.ನಂ.4/1 ರ ಪಕ್ಕಾ ಬುಕ್ಕನ್ನು ಹಾಜರು ಪಡಿಸಿರುತ್ತಾರೆ. **ನಿಶಾನೆ.ಪಿ-6** ದಿನಾಂಕ 11.12.2019 ರ ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಯಲ್ಲಿ ಕಲ್ಲುವೀರಯ್ಯನವರ ಮರಣದ ನಂತರ, ವಿಸ್ತೀರ್ಣದ ಸರ್ವೆ ನಂ. 4/3 ರ 1 ಎಕರೆ 03 ಗುಂಟೆ ಜಮೀನನ್ನು ಅವರ ಮಕ್ಕಳಾದ ವೀರಭದ್ರಯ್ಯ, ರೇಣುಕಮ್ಮ, ಬಸವರಾಜು ಮತ್ತು ಕುಮಾರಸ್ವಾಮಿ ರವರು ಪೌತಿ ವಾರಸು ಮೂಲಕ ಪಡೆದು, ನಂತರ ಸದರಿ ಸ್ವತ್ತನ್ನು 1ನೇ ಪ್ರತಿವಾದಿಗೆ ಮಾರಾಟ ಮಾಡಿರುವುದು ಕಂಡುಬಂದಿರುತ್ತದೆ. ಸದರಿ ದಾಖಲೆಯ 4ನೇ ಪುಟದಲ್ಲಿ, ಇದೇ ನಂಬರಿನಲ್ಲಿ ಪುಟ್ಟಮ್ಮನವರ ಹಾಗೂ ಅವರ ಕುಟುಂಬ ವರ್ಗಕ್ಕೆ ಬಿಟ್ಟಿರುವ 0-02 ಗುಂಟೆ ಜಮೀನನ್ನು ನೀವು ರಸ್ತೆಗೋಸ್ಕರವಾಗಿ ಬಿಟ್ಟು ಉಳಿದ 1 ಎಕರೆ 01 ಗುಂಟೆ ಜಮೀನಿನಲ್ಲಿ ಮರವಳಿಗಳನ್ನು ಇಡಲು, ಕೊಳವೆ ಬಾವಿ ಹಾಕಿಸಲು ಮತ್ತು ಮುಳ್ಳುತಂತಿ ಬೇಲಿ ಹಾಕಲು ನಿಮಗೆ ಅಧಿಕಾರ ಮತ್ತು ಅವಕಾಶ ಇರುತ್ತದೆ ಎಂದು ಸ್ಪಷ್ಟವಾಗಿ ನಮೂದಿಸಿರುವುದು ಕಂಡುಬಂದಿರುತ್ತದೆ. **ನಿಶಾನೆ.ಪಿ-7** ವಾದಿಯರ ಕುಟುಂಬದ ವಂಶವೃಕ್ಷವನ್ನು ಹಾಜರುಪಡಿಸಿರುತ್ತಾರೆ. **ನಿಶಾನೆ.ಪಿ-8** ಜೋಗೀಹಳ್ಳಿ ಗ್ರಾಮದ ನಕ್ಷೆಯನ್ನು ಹಾಜರುಪಡಿಸಿರುತ್ತಾರೆ. **ನಿಶಾನೆ.ಪಿ-9** ವಿಶೇಷ ಮುಕ್ತ್ಯಾರ್ ನಾಮೆಯನ್ನು ಹಾಜರುಪಡಿಸಿರುತ್ತಾರೆ.

**11**. ಈ ಮೇಲ್ಕಂಡ ದಾಖಲಾತಿಗಳನ್ನು ಮತ್ತು ವಾದಿಯು ಹಾಜರುಪಡಿಸಿರುವ ಮೌಖಿಕ ಸಾಕ್ಷ್ಯವನ್ನು ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಪರಿಶೀಲಿಸಿದಾಗ ದಾವಾ ಅನುಸೂಚಿತ ಸ್ವತ್ತನ್ನು ವಾದಿಯು ತನ್ನ ಗಂಡನಿಂದ ಪೌತಿ ಖಾತೆ ಆಧಾರದ ಮೇಲೆ ಬಂದಿರುವುದು ನಿಶಾನೆ.ಪಿ-2 ರಿಂದ ಕಂಡುಬಂದಿರುತ್ತದೆ. ದಾವಾ ಷೆಡ್ಯೂಲ್ ಆಸ್ತಿಯು ಅಸ್ತಿತ್ವದಲ್ಲಿರುವುದು ನಿರ್ವಿವಾದವಾದ ಸಂಗತಿಯಾಗಿರುತ್ತದೆ. ಸದರಿ ಆಸ್ತಿಗೆ ತಲುಪಲು ಪ್ರತಿವಾದಿಯರ ಜಮೀನಿನಲ್ಲಿ ರಸ್ತೆಯು ಅಸ್ತಿತ್ವದಲ್ಲಿದೆ ಎನ್ನುವುದನ್ನು ವಾದಿಯು ರುಜುವಾತುಪಡಿಸಿರುತ್ತಾರೆ. ಸದರಿ ರಸ್ತೆಯನ್ನು ಹೊರತುಪಡಿಸಿ ತಮ್ಮ ಜಮೀನಿಗೆ ಹೋಗಲು ವಾದಿಗೆ ಬದಲಿ ರಸ್ತೆ ಅಸ್ತಿತ್ವದಲ್ಲಿ ಇದೆ ಎನ್ನುವುದನ್ನು ರುಜುವಾತುಪಡಿಸುವ ಹೊಣೆಗಾರಿಕೆ ಪ್ರತಿವಾದಿಯರಿಗೆ ಹಸ್ತಾಂತರವಾಗುತ್ತದೆ. ಆದರೆ ಪ್ರತಿವಾದಿಯರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಸಹ ತಮ್ಮ ಪರ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಹಾಗೂ ತಮ್ಮ ಪರ ಯಾವುದೇ ಸಾಕ್ಷಾಧಾರಗಳನ್ನು ಹಾಜರುಪಡಿಸಿರುವುದಿಲ್ಲ. ವಾದಿಯ ದಾಖಲಾತಿ ಸಾಕ್ಷ್ಯವನ್ನು ಮತ್ತು ಮೌಖಿಕ ಸಾಕ್ಷ್ಯವನ್ನೂ ಸಹ ಅಲ್ಲಗಳೆದಿರುವುದಿಲ್ಲ. ಈ ಮೊಕದ್ದಮೆಯ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಕಂಡುಬರುವುದೇನೆಂದರೆ, ದಾವಾ ಸ್ವತ್ತಿನ ಮಾಲೀಕರಾದ ವಾದಿಯು ಪ್ರಧಾನ ಸ್ವತ್ತಿನ ಒಡೆಯರಾಗಿದ್ದು, ದಾವಾ ಸ್ವತ್ತಿನ ಮುಂದಿನ ಜಮೀನಿನ ಮಾಲೀಕರಾದ ಪ್ರತಿವಾದಿಯರು ಅಧೀನ ಸ್ವತ್ತಿನ ಮಾಲೀಕರಾಗಿದ್ದು, ವಾದಿಯು ತಮ್ಮ ಪ್ರಧಾನ ಸ್ವತ್ತಿನ ಪ್ರಯೋಜನಕಾರಿ ಉಪಯೋಗಕ್ಕಾಗಿ ಪ್ರತಿವಾದಿಯರ ಅಧೀನ ಸ್ವತ್ತಿನ ಮೇಲೆ ಹೊಣೆಗಾರಿಕೆಯನ್ನು ಹೊರಿಸಿ ಅದಿಭೋಗ ಮಾಡುತ್ತಿರುವುದು ಸಾಭೀತಾಗಿರುತ್ತದೆ. ಆದ್ದರಿಂದಲೇ ವಾದಿಯ ಗಂಡನ ಸಹೋದರನಾದ ಕಲ್ಲುವೀರಯ್ಯನವರ ವಾರಸುದಾರರು ಸರ್ವೆ ನಂ. 4/3 ರ 1 ಎಕರೆ 03 ಗುಂಟೆ ಜಮೀನನ್ನು 1ನೇ ಪ್ರತಿವಾದಿಗೆ ದಿನಾಂಕ:11.12.2019 ರ ನೋಂದಾಯಿತ ಕ್ರಯಪತ್ರದ ಮಾಡಿಕೊಡುವಾಗ ಸದರಿ ದಾಖಲೆಯ 4ನೇ ಪುಟದಲ್ಲಿ, ಇದೇ ನಂಬರಿನಲ್ಲಿ ಪುಟ್ಟಮ್ಮನವರ ಹಾಗೂ ಅವರ ಕುಟುಂಬ ವರ್ಗಕ್ಕೆ ಬಿಟ್ಟಿರುವ 0-02 ಗುಂಟೆ ಜಮೀನನ್ನು ನೀವು ರಸ್ತೆಗೋಸ್ಕರವಾಗಿ ಬಿಟ್ಟು ಉಳಿದ 1 ಎಕರೆ 01 ಗುಂಟೆ ಜಮೀನಿನಲ್ಲಿ ಮರವಳಿಗಳನ್ನು ಇಡಲು, ಕೊಳವೆ ಬಾವಿ ಹಾಕಿಸಲು ಮತ್ತು ಮುಳ್ಳುತಂತಿ ಬೇಲಿ ಹಾಕಲು ನಿಮಗೆ ಅಧಿಕಾರ ಮತ್ತು ಅವಕಾಶ

ಇರುತ್ತದೆ ಎಂದು ಸ್ಪಷ್ಟವಾಗಿ ನಮೂದಿಸಿರುವುದು ಕಂಡುಬಂದಿರುತ್ತದೆ. ಅಲ್ಲದೆ ವಾದಿಗೆ ತಮ್ಮ ಆಸ್ತಿಗೆ ಹೋಗಿ ಬರಲು ಬೇರೆ ಯಾವುದೇ ಬದಲಿ ರಸ್ತೆ ಅಸ್ತಿತ್ವದಲ್ಲಿ ಇಲ್ಲದೆ ಇರುವುದರಿಂದ ಹಾಗೂ ವಾದಿಯು ಪ್ರತಿವಾದಿಗಳ ಜಮೀನಿನಲ್ಲಿರುವ ರಸ್ತೆಯನ್ನು ಬೇಸಾಯದ ಉದ್ದೇಶಗಳಿಗಾಗಿ ಉಪಯೋಗ ಮಾಡುತ್ತಿರುವುದರಿಂದ, ಭಾರತೀಯ ಅನುಭೋಗ ಅಧಿನಿಯಮ 1882 ರ ಕಲಂ 13 ರಡಿಯಲ್ಲಿ ವಾದಿಯು ಅವಶ್ಯಕತೆಯ ಮೇಲೆ ದಾರಿಯ ಹಕ್ಕನ್ನು ಮತ್ತು ಸದೃಶ ಅನುಭೋಗದ ಹಕ್ಕನ್ನು ಪಡೆಯಲು ಅರ್ಹರಾಗಿರುತ್ತಾರೆ. ಒಂದು ವೇಳೆ ವಾದಿಯು ಕೇಳಿರುವಂತೆ ಪರಿಹಾರವನ್ನು ನೀಡದೆ ಹೋದಲ್ಲಿ, ದಾವಾ ಸ್ವತ್ತಿನ ಉಪಯೋಗಕ್ಕೆ ಅಡಚಣೆ ಉಂಟಾಗಿ ಕೃಷಿಯನ್ನೇ ನಂಬಿರುವ ವಾದಿಗೆ ತುಂಬಲಾರದ ನಷ್ಟ ಉಂಟಾಗಬಹುದು ಎನ್ನುವ ಅಭಿಪ್ರಾಯಕ್ಕೆ ಬಂದು ವಾದಿಯು ದಾವೆಯಲ್ಲಿ ಕೋರಿರುವಂತೆ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆಂದು ಅಭಿಪ್ರಾಯಪಡುತ್ತಾ. ಈ ಮೇಲ್ಕಂಡ ಎಲ್ಲಾ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ **ವಿವಾದಾಂಶ ಸಂಖ್ಯೆ- 1ರಿಂದ 3ನ್ನು ಸಕಾರಾತ್ಮಕವೆಂದು** ನಿರ್ಣಯಿಸಲಾಗಿರುತ್ತದೆ.

**12**. **ವಿವಾದಾಂಶ 4 :-** ಈ ಮೇಲ್ಕಂಡ ಎಲ್ಲಾ ವಿವಾದಾಂಶಗಳನ್ನು ನಿರ್ಣಯಿಸಲಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**:: ಆದೇಶ ::**

**ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲಾಗಿರುತ್ತದೆ.**

**ದಾವಾ ಷೆಡ್ಯೂಲ್ ನಲ್ಲಿ ವಿವರಿಸಿರುವ ಮತ್ತು ವಾದ ಪತ್ರದ ಕಚ್ಚಾ ನಕಾಶೆಯಲ್ಲಿ ತೋರಿಸಿರುವ ದಾವಾ ಎಬಿಸಿಡಿ ರಸ್ತೆಯಲ್ಲಿ ವಾದಿಗೆ ಅನುಭೋಗದ ಹಕ್ಕು ಇದೆ ಎಂದು ಘೋಷಣೆ ಮಾಡಲಾಗಿದೆ.**

**ವಾದ ಪತ್ರದ ಕಚ್ಚಾ ನಕಾಶೆಯಲ್ಲಿ ತೋರಿಸಿರುವ ದಾವಾ ಎಬಿಸಿಡಿ ರಸ್ತೆಯನ್ನು ಉಪಯೋಗಿಸಲು ವಾದಿಯ ಶಾಂತಿಯುತ ಅನುಭೋಗಕ್ಕೆ ಪ್ರತಿವಾದಿಯರಾಗಲೀ, ಅವರ ಕಾನೂನುಬದ್ಧ ಪ್ರತಿನಿಧಿಗಳಾಗಲೀ ಅಥವಾ ಏಜೆಂಟರಾಗಲೀ, ಕಾರ್ಯಭಾರಿಗಳಾಗಲೀ, ಅವರ ವಾರಸುದಾರರಾಗಲೀ**

**ಯಾವುದೇ ರೀತಿಯಿಂದಲೂ ಹಸ್ತಕ್ಷೇಪವನ್ನುಂಟುಮಾಡಬಾರದು ಎಂದು ಶಾಶ್ವತ ನಿರ್ಬಂಧಕಾಜ್ಞೆಯನ್ನು ಹೊರಡಿಸಲಾಗಿದೆ.**

**ಈ ಪ್ರಕಾರ ಡಿಕ್ರಿ ಬರೆಯುವಂತೆ ಆದೇಶಿಸಲಾಗಿದೆ.**

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ **ದಿನಾಂಕ: 08 ನೇ ಸೆಪ್ಟಂಬರ್ 2026** ರಂದು ನಾನು ಉದ್ಘೋಷಿಸಿದ್ದೇನೆ.)

ಸಹಿ/-
(ಶ್ರೀಮತಿ ಸವಿತರಾಣಿ.ಹೆಚ್.ವಿ)
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಗುಬ್ಬಿ.

**:: ಅನುಬಂಧ ::**

**1. ವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-**

ಪಿ.ಡಬ್ಲ್ಯೂ -1 : ರಾಜಣ್ಣ.

**2. ವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

| | | |
|---|---|---|
| ನಿ.ಪಿ.1 | : | ಪಹಣಿ ಪತ್ರಿಕೆ. |
| ನಿ.ಪಿ.2 | : | ಎಂ.ಆರ್. |
| ನಿ.ಪಿ.3 ಮತ್ತು 4 | : | ಪಹಣಿ ಪತ್ರಿಕೆಗಳು. |
| ನಿ.ಪಿ.5 | : | ಪಕ್ಕಾ ಬುಕ್ಕು. |
| ನಿ.ಪಿ.6 | : | ದಿನಾಂಕ:11.12.2019 ರ ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲು. |
| ನಿ.ಪಿ.7 | : | ವಂಶವೃಕ್ಷ. |
| ನಿ.ಪಿ.8 | : | ಜೋಗೀಹಳ್ಳಿ ಗ್ರಾಮದ ನಕ್ಷೆ. |
| ನಿ.ಪಿ.9 | : | ವಿಶೇಷ ಮುಕ್ತ್ಯಾರ್ ನಾಮೆ ಪತ್ರವಾಗಿರುತ್ತದೆ. |

**3. ಪ್ರತಿವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-**

- ಇಲ್ಲ -

**4. ಪ್ರತಿವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

- ಇಲ್ಲ -

ಸಹಿ/-
(ಶ್ರೀಮತಿ ಸವಿತರಾಣಿ.ಹೆಚ್.ವಿ)
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಗುಬ್ಬಿ.